ಓಎಸ್ ನಂ.20-22

ಡಿ.ಡಬ್ಲ್ಯೂ-1

ದಿನಾಂಕಃ 19-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಆರ್ ಬಿ ವಕೀಲರಿಂದಃ**

1. ನಾನು ಕುಮಟಾ ಕೊರ್ಟದಲ್ಲಿ ದಾವೆ ಮಾಡಿದ ಬಗ್ಗೆ ಹಿಂದಿನ ವಿಚಾರಣೆ ಸಮಯದಲ್ಲಿ ಕೇಳಿದ್ದೆ ಎಂದರೆ ಸರಿ . ಆ ದಾವೆಯಲ್ಲಿ ದಿಃ 20-3-2008 ರಲ್ಲಿ ರಾಜಿ ಆರ್ಜಿ ಹಾಕಲಾಗಿದ್ದು ಅದರಲ್ಲಿ ನೀವು ವಾದಿ ಯಾಗಿದ್ದಿರಿ ಎಂದರೆ ಇರಬಹುದು .ಅದರ ಮಂಜೂರಿ ನಕಲನ್ನು ನಾನು ಹಾಜರ ಪಡಿಸಿದ್ದು ಅದು ಕನ್ನಡದಲ್ಲಿ ಬರೆದಿರುತ್ತದೆ ಎಂದರೆ ಗೊತ್ತಿಲ್ಲ ನಾನು ನೋಡಿಲ್ಲ ಸಾಕ್ಷಿಗೆ ಈಗಾಗಲೆ ಗುರುತಿಸಲಾಗಿರುವ ನಿಪಿ-13 ನ್ನು ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಅದರಲ್ಲಿ ನಿಮ್ಮ ಸಹಿ ಕೂಡಾ ಇದೆ ಎಂದರೆ ಸಹಿ ನನ್ನದು ಇರುತ್ತದೆ ಆ ಸಮಯದಲ್ಲಿ ಅದರಲ್ಲಿ ನನ್ನ ತಾಯಿ ಹೇಳಿ ಬರೆಸಿದ್ದು ಇರುತ್ತದೆ ನಿಪಿ-13 ರ ರಾಜಿ ಅರ್ಜಿಯಲ್ಲಿ ನಿಮ್ಮ ತಾಯಿ ಹೇಳಿ ಬರೆಸಿದ್ದು ಇಲ್ಲ ಎಂದರೆ ತಾಯಿ ಹೇಳಿ ಬರೆಸಿದ್ದು ಅದರಲ್ಲಿ ಒಂದು ಸಹಿ ಹಾಕು ಎಂದು ಹೇಳಿದ ಕಾರಣ ನಾನು ಸಹಿ ಮಾತ್ರ ಹಾಕಿರುತ್ತೇನೆ . ನಿಪಿ-13 ರ ದಾಖಲಾತಿಯಲ್ಲಿ ನಿಮ್ಮ ತಾಯಿ ಸಹಿ ಹಾಕಿಲ್ಲ ಎಂದರೆ ಸರಿ . ಸದ್ರಿ ರಾಜಿ ಅರ್ಜಿಯಲ್ಲಿ ದಿಃ9-8-1996 ರಂದು ಪಂಚಾಯತಿ ದಾರರ ಎದುರುಗಡೆ ಆದ ಕರಾರಿನ ಬಗ್ಗೆ ಉಲ್ಲೆಖ ಇರುತ್ತದೆ ಎಂದರೆ ಅದರ ಬಗ್ಗೆ ಸರಿಯಾಗಿ ಗೊತ್ತಿಲ್ಲ ಇರಬಹುದು . ಸದ್ರಿ ಕರಾರಿನಲ್ಲಿ ದಾಸ್ತಿ ನಂಬರ 52/1+2 ಮತ್ತು ಸರ್ವೆ ನಂ 51 ವನ್ನು ನಿಮಗೆ , ನಿಮ್ಮ ಅಕ್ಕನಿಗೆ ಮತ್ತು ನಿಮ್ಮ ತಾಯಿ ಗೆ ಸೇರಿ ಕೊಡಲಾಗಿರುತ್ತದೆ ಎಂದರೆ RTC joint ಅಗಿರುತ್ತದೆ ಏಕಂದರೆ ಆ ಸಮಯದಲ್ಲಿ ನಾವು ಅಪ್ರಾಪ್ತ ವಯಸ್ಕನಾಗಿದ್ದು ಆ ಕಾರಣದಿಂದ ನನ್ನ ತಾಯಿಗೆ guardian ಆಗಿ ಇದ್ದರು .ಈ ದಾವೆ ಮಾಡುವಾಗ ನೀವು ಪ್ರಾಯ ಪ್ರಬುದ್ಧರಾಗಿ ಇದ್ದೀರಿ ಎಂದರೆ ಪ್ರಾಯ ಪ್ರಬುದ್ಧರಾಗಿಬಹುದು ಆದರೆ ನನ್ನ ತಾಯಿ ಹೇಳಿ ಮಾಡಿಸಿದ್ದು .ಈ ದಾವೆಯಲ್ಲಿ ನಿಮ್ಮ ತಾಯಿ ಹಾಗೂ ಅಕ್ಕನನ್ನು ಪ್ರತಿವಾದಿ ಯನ್ನಾಗಿ ಮಾಡಿರುತ್ತಿರಿ ಎಂದರೆ ನಾನು ದಾವೆ ಹಾಕಿರಬಹುದು ಆದರೆ ಆ ಸಮಯದಲ್ಲಿ ಎಲ್ಲವನ್ನು ಮಾಡಿದ್ದು ವಕೀಲರ ಬಳಿ ಮಾತನಾಡಿದ್ದು ಎಲ್ಲವೂ ನನ್ನ ತಾಯಿಯು . ಅವರು ಸಹಿ ಹಾಕು ಎಂದು ಹೇಳಿದ ಕಾರಣ ನಾನು ಆ ದಾವೆಯಲ್ಲಿ ಸಹಿ ಮಾತ್ರ

ಹಾಕಿರುತ್ತೇನೆ . ಈ ದಾವವೆಯಲ್ಲಿ ಹಾಕಿದ ಉದಾಹರಣೆಯಲ್ಲಿ ಹಿಂದಿನ ದಾವೆಯಲ್ಲಿ ನನ್ನ ತಾಯಿ ಹೇಳಿದಂತೆ ಮಾಡಿರುತ್ತೇನೆ ಮತ್ತು ಸಹಿ ಮಾತ್ರ ಹಾಕಿರುತ್ತೇನೇ ಎಂದು ಹೇಳಿಲ್ಲ ಎಂದರೆ ವಕೀಲರ ಹತ್ತಿರ ಹೇಳಿದ್ದೇನೆ ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ . 1996 ರಿಂದ ಇಲ್ಲಿಯವರೆಗೂ ಕೊಡ್ಲಗದ್ದೆ ಗ್ರಾಮದ ಸರ್ವೆ 51/1 ,52/1+2 ಈ 2 ಸರ್ವೆ ನಂಬರಗಳಲ್ಲಿ ನಿಮ್ಮ ಹೆಸರು ಮತ್ತು ವಾದಿಯ ಹೆಸರು ಜಂಟಿ ಯಾಗಿ ಇರುತ್ತದೆ ಎಂದರೆ 3 ಹೆಸರು ಇತ್ತು ಅದರಲ್ಲಿ ಒಂದು ಹೆಸರು ಅಂದರೆ 6 ವರ್ಷಗಳಿಂದ ತಾಯಿಯ ಹೆಸರು ಕಡಿಮೆ ಯಾಗಿರುತ್ತದೆ . ಸಾಕ್ಷಿ ಪುನಃ ಅಪ್ರಾಪ್ತ minor guardian ತಾಯಿ ಎಂಬ ಹೆಸರು ಕಡಿಮೆ ಯಾಗಿರುತ್ತದೆ .

2. ಈಗ ಸಧ್ಯದ 2 ದಾವಾಸ್ತಿಯ RTC extract ದಲ್ಲಿ ನಿಮ್ಮ ತಾಯಿ ಹೆಸರು ಇಲ್ಲ . ಸದ್ರಿ RTC ಯಲ್ಲಿ ನಿಮ್ಮ ಮತ್ತು ಸಹೋದರಿಯ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ .1996 ನೇ ಸಾಲಿನಿಂದಲೂ ನೀವು ಮತ್ತು ನಿಮ್ಮ ಅಕ್ಕ ಸಾಗುವಳಿ ಮಾಡಿ ಕೊಂಡು ಬಂದಿರುತ್ತಿರಿ ಎಂದರೆ ಅಕ್ಕ ಇಲ್ಲ ತಾಯಿಯ ಹಸರಿನಲ್ಲಿ ಯಜಮಾನಿಕೆಯನ್ನು ನಾನು ಮತ್ತು ತಾಯಿ ಮಾಡಿಕೊಂಡು ಬಂದಿರುತ್ತೇವೆ . ಈ ಆಸ್ತಿಗಳಿಂದ ಬಂದ ಉತ್ಪನ್ನವನ್ನು ಯಾರು ಪಡೆದುಕೊಂಡಿರುತ್ತಾರೆ ಎಂದರೆ ತಾಯಿ ಯಜಮಾನಿಕೆಯಲ್ಲಿ ತಾಯಿ ಪಡೆದು ಕೊಂಡಿರುತ್ತಾಳೆ .ಕುಮಟಾ ಕೊರ್ಟನ ದಾವೆಯಲ್ಲಿ ನಿಮ್ಮ ಜವಾಬು ಆಗಿರುತ್ತದೆಯಾ ಎಂದರೆ ನನಗೆ ನೆನಪಿಲ್ಲ. ಅದರಲ್ಲಿ ನೀವು ಜವಾಬನ್ನು ಹಾಕಿರುತ್ತಿರಿ ಅದನ್ನು ಈಗಾಗಲೆ ನಿಪಿ-12 ಎಂದು ನ್ಯಾಯಾಲಯಕ್ಕೆ ಈ ದಾವೆಯಲ್ಲಿ ಕಾಣಿಸಲಾಗಿರುತ್ತದೆ ಎಂದರೆ ಮಾಡಿದಿದ್ದರೆ ನೆನಪು ಇಲ್ಲ ಮಾಡಿದ್ದರೂ ಅದನ್ನು ತಾಯಿ ಹೇಳಿ ಮಾಡಿಸಿರುತ್ತಾರೆ ನನ್ನ ಜವಾಬನ್ನು ನನ್ನ ತಾಯಿ ಹೇಳಿ ಮಾಡಿಸಿರುತ್ತಾರೆ .ಸದ್ರಿ ಜವಾಬನಲ್ಲಿ 1996 ನೇ ಸಾಲಿನಿಂದ ನಾನು ಮತ್ತು ನನ್ನ ಅಕ್ಕ ಸಾಗುವಳಿ ಮಾಡಿ ಕೊಂಡು ಉತ್ಪನ್ನ ಪಡೆದು ಕೊಳ್ಳುತ್ತಿದ್ದೇವೆ ಎಂದು ಹೇಳಿರುತ್ತಿರಿ ಆ ಜವಾಬ ನಲ್ಲಿ ನನ್ನ ತಾಯಿ ಯಜಮಾನಿಕೆ ಮಾಡಿ ಎಲ್ಲ ಉತ್ಪನ್ನವನ್ನು ಅವರೆ ತೆಗೆದುಕೊಳ್ಳುತ್ತಿದ್ದರು ಎಂದು ಜವಾಬನ್ನು ನೀವು ಕೊಟ್ಟಿಲ್ಲ ಎಂದರೆ ಹಾಗೆ ಹೇಳಿದ್ದರೂ ಅದನ್ನು ಕೂಡ ನನ್ನ ತಾಯಿ ಹೇಳಿ ಹೇಳಿಸಿದ್ದು ಹಾಗಾದರೆ ನ್ಯಾಯಾಲಯದಲ್ಲಿ ನಿಮ್ಮ ತಾಯಿ ಕುಳಿತು ಕೊಂಡು ಹೀಗೆ ಹೇಳು ಮಗನೆ ಎಂದು ಹೇಳಿ ಹೇಳಿಸಿರುತ್ತಾರಾ ಎಂದರೆ ಕೊರ್ಟ ನಲ್ಲಿ ಹೇಳಿ ಕೊಟ್ಟಿಲ್ಲ .ಈ 2 ಸರ್ವೆ ನಂಬರಗಳನ್ನು

ಹೊರತು ಪಡಿಸಿ ನಿಮ್ಮ ಅಜ್ಜನ ಹೆಸರಿನಲ್ಲಿರುವ ಉಳಿದ ಜಮೀನುಗಳನ್ನು ನನ್ನ ಅಜ್ಜ ಮತ್ತು ನನ್ನ ಅಜ್ಜನ ಉಳಿದ ಜಿವಂತ ಮಕ್ಕಳು ಮಾಡಿ ಕೊಂಡು ಬಂದಿರುತ್ತಾರೆ ಎಂದರೆ ಸರಿ . ಆ ಜಮೀನುಗಳ ಉತ್ಪನ್ನ ಅವರೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ . ಆ ಜಮೀನಿಗೆ ಸಂಬಂಧಿಸಿದ ಕರ ಕಂದಾಯವನ್ನು ಅವರೆ ಕೊಡುತ್ತಿದ್ದರು ಎಂದರೆ ಸರಿ . ಅವರು ಮತ್ತು ನೀವು 1996 ರಿಂದಲೂ ಬೇರೆ ಬೇರೆ ಯಾಗಿರುತ್ತಿರಿ ಎಂದರೆ ಸರಿ . ನೀವು ಅವರ ಮನೆಗೆ ಹೋಗುತ್ತಿರಲಿಲ್ಲ ಅವರು ನಿಮ್ಮ ಮನೆಗೆ ಬರುತ್ತಿರಲಿಲ್ಲ ಎಂದರೆ ಹೋಗಿ ಬಂದು ಮಾಡುತ್ತಿದ್ದೆವು .

3. 1996 ನೇ ಸಾಲಿನಲ್ಲಿ ನಿಮ್ಮ ಅಜ್ಜ ನ ಹೆಸರಿನಲ್ಲಿ ಒಟ್ಟು ಎಷ್ಟು ಜಮೀನುಗಳು ಇದ್ದವು ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ . ಈಗಲಾದರೂ ಅದರ ಬಗ್ಗೆ ಮಾಹಿತಿ ಇರುತ್ತದೆಯಾ ಎಂದರೆ ಸ್ವಲ್ಪ ಮಾಹಿತಿ ಇದೆ . ನನ್ನ ಅಜ್ಜನ ಹೆಸರಿಗೆ ಎಷ್ಟು ಜಮಿನು ಇರುತ್ತದೆ ಹಾಗೂ ನಮ್ಮ joint account ನಲ್ಲಿ 3 ಎಕರೆ 34 ಗುಂಟೆ ಹಾಗೂ 6 ಗುಂಟೆ ಒಟ್ಟು 4 ಎಕರೆ ಜಮೀನು ಇರುತ್ತದೆ . ಅವರ ಹಸೆರಿನಲ್ಲಿ ಅಜಮಾಸು 20 ರಿಂದ 25 ಎಕರೆ ಜಮಿನು ಇರಬಹುದು ಸರಿಯಾಗಿ ಹೆಳಲು ಅಗುವುದಿಲ್ಲ ದಾಖಲಾತಿ ನೋಡಿ ಹೇಳಬೇಕಾಗುತ್ತದೆ .ಅದರ ಬಗ್ಗೆ ದಾಖಲಾತಿಯನ್ನು ಹಾಜರ ಮಾಡಿರುತ್ತಿರಾ ಎಂದರೆ ದಾಖಲಾತಿ ಹಾಜರ ಪಡಿಸಿಲ್ಲ .ಅವುಗಳ ಸರ್ವೆ ನಂಬರ ಯಾವುವು ಎಂದರೆ ಸರ್ವೆ ನಂಬರ 95,90,50 ಉಳಿದದ್ದು ನೆನಪಿಗೆ ಬರುತ್ತಿಲ್ಲ ದಾಖಲಾತಿ ನೋಡಿ ಹೇಳಬೇಕು . ಈ ಎಲ್ಲಾ ಸರ್ವೆ ನಂಬರ ವನ್ನು ಹಾಗೂ ದಾಖಲಾತಿ ಯಲ್ಲಿರುವ ಸರ್ವೆ ನಂಬರವನ್ನು ಹಿಂದಿನ ದಾವೆಯಲ್ಲಿ ನಮೂದು ಮಾಡಿರುತ್ತಿರಾ ಎಂರೆ ನಮೂದು ಮಾಡಿರಬಹುದು ಸರಿಯಾಗಿ ನೆನಪಿಗೆ ಬರುತ್ತಿಲ್ಲ .ನಿಮ್ಮ ಅಜ್ಜನ ಹೆಸರಿಗೆ 22 ರಿಂದ 25 ಎಕರೆ ಜಮಿನು ಗಳು ಇರಬಹುದು ಎಂದು ಹೇಳಿರುತ್ತಿರಿ ಅದರಲ್ಲಿ ಎಷ್ಟು ಜನ ಪಾಲುದಾರರು ಇರಬಹುದು ಎಂದರೆ 6 ಜನ ಪಾಲುದಾರರು ಇರಬಹುದು . ಅವರ ಪಾಲಿಗೆ ಹೋದ ಜಮೀನುಗಳನ್ನು ಎಷ್ಟು ಗದ್ದೆ ಜಮಿನುಗಳು ಮತ್ತು ಎಷ್ಟು ಬಾಗಾಯತ ಜಮಿನುಗಳು ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ . ಈಗ ಎಷ್ಟು ಗದ್ದೆ ಜಮಿನು ಎಷ್ಟು ಬಾಗಾಯತ ಜಮಿನು ಎಂದರೆ 6 ಎಕರೆ ಗದ್ದೆ ಜಮಿನು ಉಳಿದದ್ದು ಬಾಗಾಯತ ಜಮಿನು ಎಂದು ಹೇಳುತ್ತಾರೆ . ನಮಗೆ ಕೊಟ್ಟಂತಹ ಪೂರ್ತಿ ಜಾಗ ಬಾಗಾಯತ ಜಮಿನು ಅಗಿತ್ತು . ನಮಗೆ ಕೊಟ್ಟಂತಹ ಜಮಿನು ಒಂದೆ ಕಪೌಂಡದಲ್ಲಿ ಇತ್ತು .

ಈ ಜಮೀನಿನ ಅಕ್ಕ ಪಕ್ಕದಲ್ಲಿ  ಬೆಟ್ಟ ಜಮಿನು ಇದ್ದು ತೋಟ ವಿಸ್ತರಣೆ ಮಾಡುವಂತಹ ಪರಿಸ್ದಿತಿ ಆ ಕಾಲಕ್ಕೆ ಇತ್ತು ಎಂರೆ ಆಗ  ಬೆಟ್ಟ ಇತ್ತು ವಿಸ್ತರಣೆ ಮಾಡಲು ಅವಕಾಶ ಇತ್ತೊ ಎಂದು ಇಲ್ಲವೊ ಎಂದು  ನನಗೆ ಗೊತ್ತಿರಲಿಲ್ಲ ಅದರ ನಂತರದಲ್ಲಿ ನನಗೆ ತಿಳುವಳಿಕೆ ಬಂದ ನಂತರ ಬೆಟ್ಟ ಜಮಿನು ವಿಸ್ತರಣೆ ಮಾಡಿದ್ದೇನೆ.

4. ಆ ಜಮಿನುಗಳಿಗೆ ಸಂಬಂಧಿಸಿದಂತೆ ಈ ಎರಡು ಸರ್ವೆ ನಂಬರಗಳಿಗೆ ಸರ್ವೆ ನಕಾಶೆ ಇರುತ್ತದೆ ಎಂದರೆ ಸರಿ . ಗಡಿ ಕಲ್ಲು ಕೂಡ ಇರುತ್ತದೆ ಎಂದರೆ ನಾನು ನೋಡಿಲ್ಲ . ಈ ಎರಡು ದಾವಾ ಜಮಿನುಗಳನ್ನು ಸ್ಥಳದಲ್ಲಿ ಗುರುತಿಸಲು ಅವಕಾಶ ಇರುತ್ತದೆ ಎಂದರೆ ಚಿಕ್ಕಪ್ಪ  ಮತ್ತು ನಾವುಗಳು ಸೇರಿ ಕೊಂಡು ಗುರುತಿಸಲು ಮಾಡಿಕೊಂಡಿರುತ್ತೇವೆ .

5. ನನ್ನ ಅಕ್ಕ 1996 ನೇ ಸಾಲಿನಲ್ಲಿ ನಮ್ಮ ಕುಟುಂಬದಲ್ಲಿ ವಾಂಟಣಿ ಆಗಿ ಧನಂಜಯ ಹೆಗಡೆ ಯವರಿಗೆ ಕೊಟ್ಟಂತಹ ಆಸ್ತಿ ಎಂದು ಹೇಳುತ್ತಾರೆ ಎಂದರೆ ವಾಂಟಣಿ ಆಗಿದ್ದರ ಬಗ್ಗೆ ನಮಗೆ ಗೊತ್ತಿಲ್ಲ ಆದರೆ ಪಂಚಾಯತಿ ಯಾಗಿ ಬಾಯಿ ಮಾತಿನ ಮೂಲಕ ಅಜ್ಜ ಮಾಡಿ ಕೊಟ್ಟದ್ದು ಇರುತ್ತದೆ .2008 ನೇ ಇಸ್ವಿಯಲ್ಲಿ ದಾವೆ ನಿಖಾಲೆಯಾದ ನಂತರ ನಿವೇನಾದರೂ ಇಲ್ಲಿಯ ವಾಂಟಣಿ ಕುರಿತಾಗಿ  ಕ್ರಮ ತೆಗೆದು ಕೊಂಡಿರುತ್ತಿರಾ ಎಂದರೆ ವಾಂಟಣಿ ಆದದ್ದು  ಗೊತ್ತಿಲ್ಲ ಕ್ರಮ ತೆಗೆದು ಕೊಂಡಿಲ್ಲ . .

( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು  ಮಾಡಿಸಲಾಯಿತು)

ಓ  ಹೇ ಕೆ ಸರಿ ಇದೆ.

ಹಿರಿಯ  ಸಿವಿಲ್  ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.